ಭಾಷೆ ಸಂಸ್ಕೃತಿ ಧರ್ಮ ಜನಾಂಗಗಳು ಎರಡು ಶತಮಾನ ಕಾಲ ಬೆರೆತ ಪ್ರಯೋಗಭೂಮಿ ಆಗಿತ್ತು. ಕರ್ನಾಟಕದಲ್ಲಿ ಇಂತಹ ಮತ್ತೊಂದು ಪ್ರಯೋಗ ಭೂಮಿಯೆಂದರೆ ಕೆ.ಜಿ.ಎಫ್. ನೀಲಗಿರಿಯಂತೆ ಇದೂ ಕೂಡ ಬ್ರಿಟಿಷರ ಉದ್ಯಮಶೀಲತೆಯು ಹಲವು ಭಾಷೆ, ಧರ್ಮ, ಜಾತಿ ಪ್ರದೇಶಗಳ ಜನರನ್ನು ಸೆಳೆದ ಪರಿಣಾಮವಾಗಿ, ಬಹುಭಾಷಿಕ ಬಹುಧಾರ್ಮಿಕ ಬಹುಸಾಂಸ್ಕೃತಿಕ ತಾಣವಾಗಿ ರೂಪುಗೊಂಡ ಊರು. ತಂಪುಹವೆಗೆ ಖ್ಯಾತವಾದ ನೀಲಗಿರಿಯನ್ನು ಬ್ರಿಟಿಷರು ಶಿಮ್ಲಾದಂತೆ ತಮ್ಮ ಪರ್ಯಾಯ ವಾಸಸ್ಥಾನವನ್ನಾಗಿ ಬದಲಾಯಿಸಿದರು. ಅಲ್ಲಿ ಬ್ರಿಟಿಷ್ ಸೇನೆಯ ದಂಡುಪ್ರದೇಶವೂ ವಿವಿಧ ಕಾರ್ಖಾನೆಗಳೂ ಇದ್ದವು. ಅಲ್ಲಿ ಬ್ರಿಟಿಷ್ ಸೈನಿಕರು ಪ್ಲಾಂಟರುಗಳು ಅಧಿಕಾರಿಗಳು ಅಲ್ಲಿನ ಸ್ಥಳೀಯ ಮಹಿಳೆಯರನ್ನು ಮದುವೆಯಾಗುವ, ವಲಸೆ ಬಂದ ತಮಿಳು ಮಲೆಯಾಳ ಕನ್ನಡಿಗ ಕೂಲಿಕಾರರು ಪರಸ್ಪರ ಬೀಗತನ ಮಾಡುವ, ಇವರೆಲ್ಲರೂ ನೀಲಗಿರಿಯ ಮೂಲನಿವಾಸಿ ಬುಡಕಟ್ಟುಗಳ ಜತೆ ಸಂಬಂಧ ಬೆಳೆಸುವ ವಿದ್ಯಮಾನ ನಡೆದವು. ಧರ್ಮಾಂತರ ಕೂಡ ನಡೆಯಿತು. ಮದರಾಸು, ಕೇರಳ, ಕರ್ನಾಟಕ ರಾಜ್ಯಗಳ ಹಾಗೂ ಇಂಗ್ಲೆಂಡಿನ ವಲಸಿಗರ, ಆದಿವಾಸಿಗಳ ಹಾಡಿಗಳಿದ್ದ ಪ್ರದೇಶದಲ್ಲಿ ಬದುಕುತ್ತ ಮಿಶ್ರಸಂಸ್ಕೃತಿಯನ್ನು ರೂಪಿಸಿದರು.




'ಮಂಜಿನೆಡೆಯ ಚಿತ್ರಗಳು', 'ಕೋಡೆಮಳೆ' ಕೃತಿಗಳಲ್ಲಿ ಮಿಶ್ರ ಸಂಸ್ಕೃತಿಯ ಚಿತ್ರಗಳು ಮತ್ತೆಮತ್ತೆ ಬರುತ್ತವೆ. ಬೆಂಗಳೂರಿನ ದಂಡುಪ್ರದೇಶದಲ್ಲಿ ಹುಟ್ಟಿಬೆಳೆದ ಆಂಗ್ಲೊಇಂಡಿಯನ್ ಡೊನಾಲ್ಡ್ ಅಂಡರ್ಸನ್ ಅವರ 'ಕೊನೆಯ ಬಿಳಿ ಬೇಟೆಗಾರ' ಆತ್ಮಕಥೆಯಲ್ಲೂ ಇಂತಹ ಸಂಕರ ಸಂಸ್ಕೃತಿಯ ನೆನಪುಗಳಿವೆ.

ಕ್ವಿಟ್ ಇಂಡಿಯಾ ಚಳುವಳಿ ಶುರುವಾದಾಗ, ನೀಲಗಿರಿಗೆ ಸ್ವಾತಂತ್ರ್ಯ ಚಳುವಳಿಗಾರರು ಪ್ರವೇಶಿಸಿದಾಗ, ನೀಲಗಿರಿಯ ಬ್ರಿಟಿಷರು ತಮ್ಮ ವೈಭವದ ಬದುಕಿನ ತೋಟ, ವಾಹನ, ಬಂಗಲೆಗಳನ್ನು ಸಿಕ್ಕಬೆಲೆಗೆ ಮಾರಿ ದೇಶತ್ಯಾಗ ಮಾಡಿದರು. ಮೈಸೂರು, ಕೇರಳ, ತಮಿಳುನಾಡು ಸೀಮೆಯಿಂದ ಕೂಲಿಗೆಂದು ಬಂದು ನೆಲೆಸಿ, ಸ್ಥಿತಿವಂತರಾಗಿದ್ದ ಜನ ಅವನ್ನು ಖರೀದಿಸಿ ಹೊಸ ದೊರೆಗಳಾದರು. ಕ್ರೈಸ್ತಧರ್ಮ ಸ್ವೀಕರಿಸಿ ಆಂಗ್ಲರನ್ನು ಮದುವೆಯಾದವರೂ ಅವರ ಹೊಟ್ಟೆಯಲ್ಲಿ ಹುಟ್ಟಿದವರೂ ಚೆಟ್ಟೆಕಾರರಾಗಿ 'ನಿಮ್ಮೊಳಗಿದ್ದೂ ನಿಮ್ಮಂತಾಗದ' ಅಭದ್ರ ಬದುಕನ್ನು ಬದುಕಲು ಆರಂಭಿಸಿದರು. ನೀಲಗಿರಿಯ ಮೂಲನಿವಾಸಿಗಳ ಬಾಳಿನಲ್ಲಿ ಈ ವಲಸಿಗರ ಮಹಾಪ್ರವಾಹದಿಂದಲೂ ಹಾಗೂ ಬ್ರಿಟಿಷರ ಸಂಪರ್ಕದಿಂದಲೂ ಊಹಾತೀತ ಪಲ್ಲಟಗಳು ಸಂಭವಿಸಿದವು. ಧರ್ಮ, ಸಂಸ್ಕೃತಿ ಅಧ್ಯಯನ ಮಾಡುವವರಿಗೆ ಅಪೂರ್ವವೆನಿಸುವ ಈ ಪ್ರದೇಶದ ವಿಶಿಷ್ಟ ವಿವರಗಳನ್ನು ಪರಂಜ್ಯೋತಿಯವರ ಕೃತಿಗಳು ದಾಖಲಿಸುತ್ತವೆ. ವಲಸಿಗರ ದುಡಿಮೆ ಸಹನಶೀಲತೆ, ಹೊಂದಾಣಿಕೆ ಮತ್ತು ಉದ್ಯಮಶೀಲತೆಯ ಅಪೂರ್ವ ಚಿತ್ರ ಮತ್ತು ನೋಟಗಳನ್ನು ಇವು ಒಳಗೊಂಡಿವೆ. ಇವು ಚರಿತ್ರಕಾರರೂ ಮಾನವಶಾಸ್ತ್ರೀಯ ವಿದ್ವಾಂಸರೂ ಕೊಡುವ ಶುಷ್ಕ ವಿವರಣೆಗಳನ್ನು ದಾಟಿ, ಕಾಲಗತಿ ಬದಲಾವಣೆಯ ಸುಳಿಯಲ್ಲಿ ಸಿಕ್ಕ ಬದುಕನ್ನು ಸಹಾನುಭೂತಿಯಿಂದ ಚಿತ್ರಿಸುತ್ತವೆ.

ಭಾಷೆಯ ದೃಷ್ಟಿಯಿಂದ ಪರಂಜ್ಯೋತಿಯವರಿದ್ದ ನೀಲಗಿರಿ, ಪುತ್ತೂರು, ಮದರಾಸು, ಬೆಂಗಳೂರು ಬಹುಭಾಷಿಕ ಪ್ರದೇಶಗಳು. ನೀಲಗಿರಿ ಭೌಗೋಳಿಕವಾಗಿ ಮೂರು ರಾಜ್ಯಗಳು ಸೇರುವ ತಾಣ ಕೂಡ. ಹೀಗಾಗಿ ಪರಂಜ್ಯೋತಿಯವರು ತಮಿಳು, ಹಿಂದಿ, ಬಡಗ, ಮಲೆಯಾಳ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಗತಿಯನ್ನು